**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.</u>**

<u>ಸಿ.ಸಿ. ನಂ.23/2018</u>

CW-4/PW-5

| | | |
|---|---|---|
| ಹೆಸರು | : | ರೇಣುಕಪ್ಪ.ಟಿ. |
| ತಂದೆ ಹೆಸರು | : | ತಿಮ್ಮಯ್ಯ |
| ವಯಸ್ಸು | : | 49 ವರ್ಷ |
| ವೃತ್ತಿ | : | ಎ.ಎಸ್.ಐ., ಗದಗ ನಗರ ರೈಲ್ವೆ ಪೊಲೀಸ್ ಠಾಣೆ, |
| ವಾಸ ಸ್ಥಳ | : | ಗದಗ |
| ದಿನಾಂಕ | : | 16-07-2026. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಕಲಂ 299 ಸಿ.ಆರ್.ಪಿ.ಸಿ., ಅಡಿಯಲ್ಲಿ ಸಾಕ್ಷಿಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-</u>

ನಾನು ಬೆಂಗಳೂರು ನಗರ ರೈಲ್ವೆ ಪೊಲೀಸ್ ಠಾಣೆಯಲ್ಲಿ 2017 ರಿಂದ 2020ರವರೆಗೆ ಮುಖ್ಯ ಪೇದೆಯಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 04.04.2017ರಂದು ಈ ಕೇಸಿಗೆ ಸಂಬಂಧಪಟ್ಟಂತೆ ನನ್ನನ್ನು ಮತ್ತು ಚಾಸಾ-5ರವರನ್ನು ಆರೋಪಿಯ ಪತ್ತೆಗಾಗಿ ನೇಮಿಸಲಾಗಿದ್ದು, ಅದರಂತೆ ನಾವು ಅದೇ ದಿನ ಪ್ಲಾಟ್ ಫಾರ್ಮ್ ನಂ.5, ಬೆಂಗಳೂರು ನಗರ ರೈಲ್ವೆ ನಿಲ್ದಾಣದಲ್ಲಿ ಬೆಳಗ್ಗೆ ಸುಮಾರು 6.45 ಗಂಟೆಗೆ ಟುಟಿಕಾರ್ನ್ ಎಕ್ಸ್ ಪ್ರೆಸ್ ರೈಲು ಗಾಡಿ ಬಂದು ನಿಂತಾಗ ಒಬ್ಬ ಆಸಾಮಿ ಪ್ರಯಾಣಿಕರ ಮಧ್ಯೆ ನುಸುಳಿ ಹೋಗಿ, ಬೋಗಿಯಿಂದ ಬೋಗಿಗೆ ಹತ್ತಿ ಇಳಿದು ಮಾಡುತ್ತಿದ್ದನು, ಆತನನ್ನು ಹಿಡಿದು ವಿಚಾರ ಮಾಡಲು ಹೋದಾಗ ಓಡಿ ಹೋದನು. ಆಗ ಕರ್ತವ್ಯದಲ್ಲಿದ್ದ ಚಾಸಾ-6, ಚಾಸಾ-7ರವರು ಆತತನ್ನು ಹಿಡಿಯಲು ನಮಗೆ ಸಹಕರಿಸಿದರು. ನಂತರ ಆತನನ್ನು ವಿಚಾರಿಸಲಾಗಿ ಸಮಂಜಸ ಉತ್ತರ ನೀಡಲಿಲ್ಲ ಹಾಗೂ ಆತನ ಬಳಿ ಅಧಿಕೃತ ರೈಲ್ವೆ ಟಿಕೆಟ್ ಇರಲಿಲ್ಲ. ಆತನ ವಿಳಾಸ ಕೇಳಲಾಗಿ ಸಾಗರ ನಾಯಕ್

<u>ಸಿ.ಸಿ. ನಂ.23/2018ರಲ್ಲಿ</u>
CW-4/PW-5

ಬಿನ್ ಕೀರ್ತಿ ಬೇರಿ ನಾಯಕ್, ತಿರುಮೊಗ ಜಿಲ್ಲೆ, ಒರಿಸ್ಸಾ ರಾಜ್ಯ ಎಂದು ತಿಳಿಸಿದನು. ನಂತರ ಆತನ ಬಳಿಯಿದ್ದ ನಗದು ಹಣದ ಬಗ್ಗೆ ವಿಚಾರಿಸಲಾಗಿ ಆತನು ರೈಲು ಪ್ರಯಾಣಿಕರಿಂದ ಕಳವು ಮಾಡಿರುವುದಾಗಿ ಒಪ್ಪಿಕೊಂಡನು. ಆತನನ್ನು ಹೆಚ್ಚಿನ ವಿಚಾರಣೆಗಾಗಿ ಠಾಣೆಗೆ ಕರೆತಂದು ಚಾಸಾ-10ರವರ ಮುಂದೆ ಹಾಜರುಪಡಿಸಿ, ಲಿಖಿತ ವರದಿಯನ್ನು ಸಲ್ಲಿಸಿರುತ್ತೇನೆ. ಸದರಿ ವರದಿಯ ದೃಢೀಕೃತ ಪ್ರತಿಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.